ಕ್ರಿ.ಮಿಸ್. ನಂ.127/2023

ಅರ್.ಡಬ್ಲೂ ಃ 1

# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ, ಶೋರಾಪೂರ

**ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಎಂ.ಟಿ.ಎಂ ವಕೀಲರಿಂದಃ**

2 ನೇ ಅರ್ಜಿದಾರಳು ನನ್ನ ಹೆಂಡತಿ. 1 ಮತ್ತು 3 ನೇ ಅರ್ಜಿದಾರರು ನನ್ನ ಮಕ್ಕಳು ಇರುತ್ತಾರೆ. 4 ವರ್ಷಗಳ ಹಿಂದೆ ಅರ್ಜಿದಾರಳು ಮತ್ತು ನನ್ನ ಮದುವೆ ಬೋನಾಳ ಗ್ರಾಮದ ಗಾಳಿ ಬಸವೇಶ್ವರ ದೇವಸ್ಥಾದಲ್ಲಿ ಆಗಿರುತ್ತದೆ. ನನ್ನ ಮದುವೆ ಸಮಯದಲ್ಲಿ ರೂ.2 ಲಕ್ಷ ಮತ್ತು 8 ತೊಲ ಬಂಗಾರ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯಾದ ನಂತರ 2 ನೇ ಅರ್ಜಿದಾರಳನ್ನು ನನ್ನ ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಮದುವೆಯಾಗಿ 1 ವರ್ಷದವರೆಗೆ ನಾವಿಬ್ಬರೂ ಚೆನ್ನಾಗಿ ಇದ್ದೆವು. ಆಗ ಚೆನ್ನಾಗಿ ಇದ್ದಾಗ ನನ್ನ ಮಗನಾದ 1 ನೇ ಅರ್ಜಿದಾರ ಹುಟ್ಟಿರುತ್ತಾನೆ ಎಂದರೆ ಸರಿ. ಮಗ ಹುಟ್ಟಿದ ನಂತರ, ಗಂಡನ ಮನೆಗೆ ಬಂದ ನಂತರ ನಾನು ಮತ್ತು ನಾನು, ನನ್ನ ಅಣ್ಣ ಮತ್ತು ನನ್ನ ತಾಯಿ 2 ನೇ ಅರ್ಜಿದಾರಳಿಗೆ ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಹಾಗೆ ನಾವು ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟಿದ್ದರಿಂದ 2 ನೇ ಅರ್ಜಿದಾರಳು ನನ್ನ ಮೇಲೆ ಕ್ರಿಮಿನಲ್ ಪ್ರಕರಣ ಸಂಖ್ಯೆ 131/2020 ನ್ನು ದಾಖಲಿಸಿರುತ್ತಾಳೆ ಎಂದರೆ ಸರಿ. ನಾನು ಕುಡಿತದ ಚಟಕ್ಕೆ ಅಂಟಿಕೊಂಡು, ನನ್ನ ತಾಯಿ ಮತ್ತು ನನ್ನ ಅಣ್ಣನ ಮಾತು ಕೇಳಿ, ರೂ 2 ಲಕ್ಷ ಮತ್ತು 5 ತೊಲ ಬಂಗಾರ ತೆಗೆದುಕೊಂಡ ಬಾ ಅಂತ 2 ನೇ ಅರ್ಜಿದಾರಳಿಗೆ ಕಿರಕುಳ ಕೊಡುತ್ತಿದ್ದೆವು, ಇಂದೆಲ್ಲ, ನಾಳೆ ಸುಧಾರಿಸಿಕೊಂಡು ಹೋಗಬಹುದು ಎಂದು ಅರ್ಜಿದಾರಳು ಸುಮ್ಮನಿದ್ದಳು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಬಡವರು ಇದ್ದಾರೆ ನಾವು ಎಲ್ಲಿಂದ ತರಬೇಕು ಅಂತಾ 2 ನೇ ಅರ್ಜಿದಾರಳು ಹೇಳಿರುತ್ತಾಳೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ನಾನು ಸಂಬಂಧಿಕರಲ್ಲಿಯೇ ಮದುವೆ ಆಗಿದ್ದರಿಂದ ಅವಳಿಂದ ಯಾವುದೇ ಹಣವನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. 2 ನೇ ಅರ್ಜಿದಾರಳು ನನ್ನ ತಂದೆಯ ಕಡೆಯಿಂದ ಸಂಬಂಧಿಕಳು ಇರುತ್ತಾಳೆ. ಸದರಿಯವಳು ನನಗೆ ಯಾವುದೇ ಸಂಬಂಧಿಕಳು ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀನು ಕೇಳಿದ ಹಣ, ಬಂಗಾರ ತರಲು ನನ್ನ ತವರು ಮನೆಯವರಿಗೆ ಆಗುವುಹಿದಿಲ್ಲ, ಎಲ್ಲಿಂದ ತರಬೇಕು ಅಂತಾ 2 ನೇ ಅರ್ಜಿದಾರಳು ಹೇಳಿದ್ದರಿಂದ, ನಾನು, ನನ್ನ ಅಣ್ಣ, ತಾಯಿ ಅರ್ಜಿದಾರಳಿಗೆ ಅವಾಚ್ಯ ಶಬ್ದಳಿಗಂದ ಬೈದು ಮನೆಯಿಂದ ಹಾಕಿರುತ್ತೇವೆ ಎಂದರೆ ಸರಿಯಲ್ಲ.

02. ನನ್ನ ಹೆಂಡತಿ ಒಂದುವರೆ ವರ್ಷಗಳಿಂದ ತವರು ಮನೆಯಲ್ಲಿ ಇರುತ್ತಾಳೆ. ನಂತರ ನಾನು ನನ್ನ ಹೆಂಡತಿಯ ತವರು ಮನೆಗೆ 2-3 ಸಾರಿ ಹೋಗಿದ್ದೇನು, ನನ್ನ ಹೆಂಡತಿಯ ತಾಯಿ ನನಗೆ ಬರಬೇಡ ಎಂದು ಹೇಳಿರುತ್ತಾಳೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿ ತವರು ಮನೆಗೆ ಹೋದಾಗ ಅವಳ ಉಪಜೀವನಕ್ಕೆ ಕೊಟ್ಟಿರುತ್ತೇನೆ. ಎಷ್ಟು ಹಣ ಕೊಟ್ಟಿರುತ್ತೀಯಾ ಎಂದರೆ ಸಾಕ್ಷಿಯು ರೂ.1000/-, 1500/- ಮತ್ತು 2000/- ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಹಣವನ್ನು ಕೊಟ್ಟ ಬಗ್ಗೆ ಯಾವುದೇ ರಶೀದಿ ಇರುವುದಿಲ್ಲ. 2 ನೇ ಅರ್ಜಿದಾರಳಿಗೆ ಎರಡೂ ಮಕ್ಕಳು ಆದಾಗ ಸಿಜರಿಯನ್ ಆಗಿರುತ್ತದೆ ಎಂದರೆ ಸಾಕ್ಷಿಯು ಮೊದಲನೆ ಮಗು ಆದಾಗ ಮಾತ್ರ ಸಿಜರಿಯನ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಿಜರಿಯನ್ ಆದ ಕಾರಣ 2 ನೇ ಅರ್ಜಿದಾರಳಿಗೆ ದುಡಿಯಲು ಆಗುವುದಿಲ್ಲ ಎಂದರೆ ಸರಿಯಲ್ಲ.

03. ನನ್ನ ಕುಟುಂಬಕ್ಕೆ ಒಟ್ಟು 10 ಎಕರೆ ಆಸ್ತಿ ಇರುತ್ತದೆ. ಸದರಿ 10 ಎಕರೆ ಪೈಕಿ 3 ಎಕರೆ ನೀರಾವರಿ ಜಮೀನು ಇರುತ್ತದೆ, ಉಳಿದ ಜಮೀನು ನೀರಾವರಿ ಇರುವುದಿಲ್ಲ. ನಮ್ಮ ಮನೆತನಕ್ಕೆ 15 ಎಕರೆ ಜಮೀನು ಇರುತ್ತದೆ, 15 ಎಕರೆ ಜಮೀನು ನೀರಾವರಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 12 ಎಕರೆ ಜಮೀನು ಇದ್ದು, 2 ಎಕರೆ ಜಮೀನನ್ನು ಮಾರಾಟ ಮಾಡಿ, 10 ಎಕರೆ ಜಮೀನು ಉಳಿದಿರುತ್ತದೆ. ನಮ್ಮ ಊರು ಬೋನಾಳದಲ್ಲಿ ಭತ್ತ ಬೆಳೆಯುತ್ತಾರೆ. ನಮ್ಮ ಊರಿನಲ್ಲಿ ನೀರಾವರಿ ಇರುವುದರಿಂದ ಭತ್ತವನ್ನು ಎರಡು ಇಳುವರಿ ತೆಗೆಯುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಹೊಲದಲ್ಲಿ ಎರಡು ಇಳುವರಿ ಬರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.64/1 ಕ್ಷೇತ್ರ 9 ಎಕರೆ 27 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.178/2 ಕ್ಷೇತ್ರ 2 ಎಕರೆ 6 ಗುಂಟೆ, ಸರ್ವೆ ನಂ.213/3 ಕ್ಷೇತ್ರ 12 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.54/1 ಕ್ಷೇತ್ರ 03 ಎಕರೆ 10 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಜಮೀನುಗಳು ನನ್ನ ತಾಯಿ ಮತ್ತು ನನ್ನ ದೊಡ್ಡಪ್ಪಂದಿರ ಜಂಟಿ ಖಾತೆಯಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಸರ್ವೆ ನಂ.64/1 ಜಮೀನಿನ ಪಹಣಿಯಲ್ಲಿ ನೀರಾವರಿ ಜಮೀನು ಎಂದು ನೀರಾವರಿ ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಾಗೆ ನಮೂದು ಇದೆ ಆದರೆ ನೀರು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಭತ್ತದ ಬೆಳೆಯಿಂದ ವರ್ಷಕ್ಕೆ ರೂ.10 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನುಗಳನ್ನು ನಾನೇ ಬಿತ್ತಿ ಬೆಳೆಯುತ್ತಿದ್ದೇನೆ, 2ನೇ ಅರ್ಜಿದಾರಳಿಗೆ ಜೀವನಾಂಶ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು 2ನೇ ಮನೆ ಮಾಡು ಎಂದು ಅರ್ಜಿಯಲ್ಲಿ

ಬರೆಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯನ್ನು ನೋಡುವುದಾಗುತ್ತದೆಂದು ಬೇರೆ ಮನೆ ಮಾಡು ಎನ್ನುತ್ತಿದ್ದಳು ಎಂದು ನುಡಿಯುತ್ತಾರೆ. ನಾನು ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪೂರ.